**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 26-07-2023.**

**ಪಾಟೀ ಸವಾಲು - 1 ನೇ ಪ್ರತಿವಾದಿಯ ಪರ ವಕೀಲರಿಂದ :**

**1)** ಜಯಮ್ಮ ಮತ್ತು ಪಾರ್ವತಮ್ಮ ಈ ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಪಾರ್ವತಮ್ಮ, ಜಯಮ್ಮ ಅವರ ತಂಗಿ. 2 ನೇ ವಾದಿ ನನಗೆ ಸಾಕ್ಷಿ ನುಡಿಯಲು ಅಧಿಕಾರ ಪತ್ರ ನೀಡಿರುತ್ತಾರೆ. 2 ನೇ ವಾದಿಯು ಮೌಖಿಕವಾಗಿ ನನಗೆ ಅಧಿಕಾರ ನೀಡಿರುತ್ತಾರೆ. 2 ನೇ ವಾದಿ ಇಂದಿನವರೆಗೂ ನ್ಯಾಯಾಲಯಕ್ಕೆ ಬಂದಿರುವುದಿಲ್ಲ. 1 ನೇ ವಾದಿ ಜೀವಂತವಿದ್ದಾಗ ನ್ಯಾಯಾಲಯಕ್ಕೆ ಬರುತ್ತಿರಲಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ಸೋದರ ಮಾವ. ನನಗೆ 3 ರಿಂದ 5 ಮತ್ತು 7 ನೇ ಪ್ರತಿವಾದಿಗಳ ಪರಿಚಯವಿದೆ. 3 ನೇ ಪ್ರತಿವಾದಿ ನಮ್ಮ ದೊಡ್ಡಮ್ಮ. 4 ಮತ್ತು 5 ನೇ ಪ್ರತಿವಾದಿ ನನ್ನ ಚಿಕ್ಕಮ್ಮ. 7 ನೇ ಪ್ರತಿವಾದಿ ನಮ್ಮ ಅಜ್ಜಿ. 1 ನೇ ವಾದಿಯ ತಂದೆಯ ಹೆಸರು ಉತ್ತನಳ್ಳಪ್ಪ. ಅವರ ತಂದೆಯ ಹೆಸರು ಬಚ್ಚಣ್ಣ. ಬಚ್ಚಣ್ಣ ಅವರಿಗೆ ಭೈರಪ್ಪ, ಅಪ್ಪಾಜಪ್ಪ ಮತ್ತು ಉತ್ತನಳ್ಳಪ್ಪ ಎಂಬ ಮೂರು ಜನ ಮಕ್ಕಳು. ಬಚ್ಚಣ್ಣನವರು ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅಪ್ಪಾಜಪ್ಪ ಮರಣ ಹೊಂದಿ 28 ವರ್ಷ ಆಗಿರುತ್ತದೆ. ಉತ್ತನಾಳಪ್ಪ ಮರಣ ಹೊಂದಿ 32-33 ವರ್ಷ ಆಗಿರುತ್ತದೆ ಮತ್ತು ಭೈರಪ್ಪ ಮರಣ ಹೊಂದಿ 19-20 ವರ್ಷ ಆಗಿರುತ್ತದೆ. ಆ ಬಗ್ಗೆ ನಾನು ಮರಣ ಪ್ರಮಾಣ ಪತ್ರಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಅಪ್ಪಾಜಪ್ಪ ಅವರಿಗೆ ಮಕ್ಕಳಿಲ್ಲ. ಉತ್ತನಾಳಪ್ಪ ಅವರಿಗೆ 5 ಜನ ಹೆಣ್ಣು ಮಕ್ಕಳು ಮತ್ತು ಒಬ್ಬ ಮಗ. ಭೈರಪ್ಪ ಅವರಿಗೆ ಮಕ್ಕಳೇ ಇಲ್ಲ. ಅವರ ಪತ್ನಿ ಸಹ ಮರಣ ಹೊಂದಿರುತ್ತಾರೆ. ನಿ.ಪಿ.1 ನ್ನು 1 ನೇ ವಾದಿಯ ಹೇಳಿಕೆಯ ಪ್ರಕಾರ ತಯಾರಿಸಲಾಗಿದೆ. ನಮ್ಮ ತಾಯಿ 2003 ರಲ್ಲಿ ಮರಣ ಹೊಂದಿದ್ದು, ಆಗ ಅವರಿಗೆ ಸುಮಾರು 52 ವರ್ಷ ವಯಸ್ಸು ಆಗಿತ್ತು. ನನಗೆ ಈಗ 50 ವರ್ಷ ವಯಸ್ಸು. 1 ನೇ ವಾದಿ ಮದುವೆಯಾದಾಗಿನಿಂದ ನಮ್ಮ ಊರಿನಲ್ಲೇ ವಾಸವಿದ್ದರು. 2 ನೇ ವಾದಿ ಸಹ ಅವರ ಮದುವೆಯಾದಾಗಿನಿಂದ ಅವರ ಗಂಡನ

ಮನೆಯಲ್ಲಿ ವಾಸವಿದ್ದರು. 2 ನೇ ವಾದಿ ಮದುವೆಯಾಗಿ 45 ವರ್ಷದ ಮೇಲೆ ಆಗಿರುತ್ತದೆ. ಪ್ರತಿವಾದಿ ಸಂಖ್ಯೆ 3 ರಿಂದ 5 ಅವರ ಮದುವೆಯಾದಾಗಿನಿಂದ ಅವರ ಗಂಡನ ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. 3 ರಿಂದ 5 ನೇ ಪ್ರತಿವಾದಿಗಳು ವಾದಿಗಳಿಗಿಂತ ದೊಡ್ಡವರು. ಅವರಿಗೆ ಮದುವೆಯಾಗಿ 50 ವರ್ಷಕ್ಕಿಂತ ಮೇಲೆ ಆಗಿರುತ್ತದೆ .

**2)** ವಾದಿಗಳು ತಮ್ಮ ಪಾಲನ್ನು ಕೇಳಿ ಈ ದಾವೆಯನ್ನು ದಾಖಲಿಸಿರುತ್ತಾರೆ. ಸುಮಾರು 15 ಆಸ್ತಿಗಳ ಬಗ್ಗೆ ಈ ದಾವೆಯನ್ನು ದಾಖಲಿಸಿರುತ್ತಾರೆ. ದಾವಾ ಆಸ್ತಿಗಳಲ್ಲಿ ಕೆಲವು ಆಸ್ತಿಗಳ ಸರ್ವೆ ಸಂಖ್ಯೆ ಗೊತ್ತು, ಕೆಲವು ಗೊತ್ತಿಲ್ಲ. ಉತ್ತನಾಳಪ್ಪ ಅವರ ಒಬ್ಬನೇ ಮಗ ಈ ದಾವೆಯ 1 ನೇ ಪ್ರತಿವಾದಿ. ಬಚ್ಚಣ್ಣ ಅವರಿಗೆ 32 ಎಕರೆ ಆಸ್ತಿ ಇತ್ತು. ಆ ಬಗ್ಗೆ ನಾನು ಪಹಣಿ, ನೋಂದಾಯಿತ ದಾಖಲೆಗಳು ಮತ್ತು ಮ್ಯುಟೇಶನ್ ಹಾಜರು ಪಡಿಸಿರುತ್ತೇನೆ. ನಾನು ಹಾಜರುಪಡಿಸಿದ ದಾಖಲೆಗಲ್ಲಿ ಬಚ್ಚಣ್ಣ ಅವರ ಹೆಸರಿನಲ್ಲಿರುವ ದಾಖಲೆಗಳು ಇಲ್ಲ ಎಂದರೆ ಸರಿ. ಅಪ್ಪಾಜಪ್ಪ, ಉತ್ತನಾಳಪ್ಪ ಮತ್ತು ಭೈರಪ್ಪ ಅವರ ಹೆಸರಿನಲ್ಲಿ ಆಸ್ತಿಗಳು ಇದ್ದವು. ಅಪ್ಪಾಜಪ್ಪ ಅವರ ಹೆಸರಿನಲ್ಲಿ ಯಾವ ಆಸ್ತಿಗಳು ಇದ್ದವು ಎಂದು ನನಗೆ ಹೇಳಲು ಬರುವುದಿಲ್ಲ. ಉತ್ತನಾಳಪ್ಪ ಅವರ ಹೆಸರಿನಲ್ಲಿ ಇದ್ದ ಆಸ್ತಿಗಳ ಬಗ್ಗೆ ನನಗೆ ಹೇಳಲು ಸಾಧ್ಯವಿಲ್ಲ. ಭೈರಪ್ಪ ನವರ ಹೆಸರಿನಲ್ಲಿ ಸರ್ವೆ ಸಂಖ್ಯೆ 32-9 ರಲ್ಲಿ 3 ಎಕರೆ ಜಮೀನು ಇತ್ತು. ಸದರಿ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಪ್ಪಾಜಪ್ಪ, ಉತ್ತನಾಳಪ್ಪ ಮತ್ತು ಭೈರಪ್ಪ ಅವರನ್ನು 1 ನೇ ಪ್ರತಿವಾದಿ ಸಾಕಿದ್ದರು ಎಂದರೆ ಸರಿ. 1 ಮತ್ತು 2 ನೇ ವಾದಿಗಳು ಮದುವೆಯಾಗುವ ಸಂದರ್ಭದಲ್ಲಿ ಅಪ್ಪಾಜಪ್ಪ, ಉತ್ತನಾಳಪ್ಪ ಮತ್ತು ಭೈರಪ್ಪರವರಿಗೆ ವಯಸ್ಸು ಆಗಿತ್ತು ಎಂದರೆ ಸರಿ. ಕುಟುಂಬದ ವ್ಯವಹಾರವನ್ನು 1 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ಡಿಗ್ರಿ ಪಡೆದು ಅಪ್ಪಾಜಪ್ಪ, ಉತ್ತನಾಳಪ್ಪ ಮತ್ತು ಭೈರಪ್ಪರವರಿಗೆ ವಯಸ್ಸಾಗಿರುವುದರಿಂದ ಬೇಸಾಯ ಮಾಡಲು ಊರಿಗೆ ಬಂದರು ಎಂದರೆ ಸರಿ. ಅಪ್ಪಾಜಪ್ಪ, ಉತ್ತನಾಳಪ್ಪ ಮತ್ತು ಭೈರಪ್ಪರವರಿಗೆ ವಯಸ್ಸಾಗಿರುವುದರಿಂದ ಬೇಸಾಯ ಮಾಡಲು ಬೇರೆ ಯಾರೂ ಇಲ್ಲದೇ ಇರುವುದರಿಂದ 1 ನೇ ಪ್ರತಿವಾದಿ ಬೇಸಾಯ

ಮಾಡಲು ಬಂದರು ಎಂದರೆ ಸರಿ. ಆ ಸಮಯದಲ್ಲಿ ಉತ್ತನಾಳಪ್ಪ ಅವರ ನಾಲ್ಕೂ ಜನ ಹೆಣ್ಣು ಮಕ್ಕಳು ಮದುವೆಯ ವಯಸ್ಸಿಗೆ ಬಂದಿದ್ದರು ಎಂದರೆ ಸರಿ. ವಾದಿಗಳು ಮತ್ತು 3 ರಿಂದ 5 ನೇ ಪ್ರತಿವಾದಿಗಳ ಮದುವೆಯನ್ನು 1 ನೇ ಪ್ರತಿವಾದಿ ಮಾಡಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ವ್ಯವಸಾಯ ಮಾಡಲು ಊರಿಗೆ ಬಂದಾಗ ಅವರಿಗೆ ಅಷ್ಟೊಂದು ಆಸ್ತಿ ಇರಲಿಲ್ಲ ಎಂದರೆ ಇತ್ತು ಎಂದು ನುಡಿಯುತ್ತೇನೆ. 1 ನೇ ಪ್ರತಿವಾದಿ ಹೆಣ್ಣು ಮಕ್ಕಳಿಗೆ ಸಾಕಷ್ಟು ಹಣ ಖರ್ಚು ಮಾಡಿ ಮದುವೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಐದೂ ಜನಕ್ಕೆ ಅವರ ತವರು ಮನೆಯವರು ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಆ ಕಾಲದಲ್ಲಿ 1 ನೇ ವಾದಿಯನ್ನು ಸಾಕಷ್ಟು ಬಂಗಾರ ನೀಡಿ ಹಣ ಖರ್ಚು ಮಾಡಿ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಊರಿನಿಂದ 1 ನೇ ಪ್ರತಿವಾದಿಯ ಊರು ಸುಮಾರು 12 ಕಿಲೋ ಮೀಟರ್ ದೂರ ಇರುತ್ತದೆ. 1 ನೇ ಪ್ರತಿವಾದಿಯಿಂದ ನಾವು ಆಗಾಗ ಬಂದು ಹಣ ತೆಗೆದುಕೊಂಡು ಹೋಗುತ್ತಿದ್ದೆವು ಎಂದರೆ ಸರಿಯಲ್ಲ. ಕೆಐಎಡಿಬಿ ಯಿಂದ ಭೂ ಸ್ವಾಧೀನ ಆದ ನಂತರ ಈ ದಾವೆ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಭೂ ಸ್ವಾಧೀನ 2006-07 ರಲ್ಲಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

**4)** ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**